O.S.358/2015 PW-1

ದಿನಾಂಕಃ 27.09.2025 ರಂದು ಸಾಕ್ಷಿಗೆ ಪ್ರಮಾಣ ವಚನ ಭೋಧಿಸಲಾಯಿತು.

**ಮುಂದುವರೆದ ಪಾಟೀ ಸವಾಲುಃ ಪ್ರತಿವಾದಿ ಪರ ವಕೀಲರಿಂದಃ**

ದಾವಾ ಸ್ವತ್ತು ಶಿರಾ ತಾಲ್ಲೂಕಿಗೆ ಸೇರಿರುತ್ತದೆ ಎಂದು ನನಗೆ ತಿಳಿದಿದೆ ಆದರೆ ಅದರ ಹೋಬಳಿ ಹೇಳಲು ಆಗುವುದಿಲ್ಲ. ಅದರ ಬಗ್ಗೆ ತಿಳಿದುಕೊಳ್ಳಲು ಪ್ರಯತ್ನ ಪಟ್ಟಿರುವಿರಾ ಎಂದರೆ ಸಾಕ್ಷಿಯು ನನ್ನ ಯಜಮಾನರಿಗೆ ತಿಳಿದಿತ್ತು ಆದರಿಂದ ನಾನು ಪ್ರಯತ್ನ ಪಟ್ಟಿಲ್ಲ ಎಂದು ನುಡಿದಿರುತ್ತಾರೆ. ದಾವಾ ಸ್ವತ್ತನ್ನು ಖರೀದಿಮಾಡಲು ಮಾತು ಕತೆ ನಮ್ಮ ಮನೆಯಲ್ಲಿ ಆಗಿತ್ತು. ಸದರಿ ದಿನದಂದು ನಾನು, ನನ್ನ ಯಜಮಾನರು, ಶಿವಕುಮಾರ್, ರಮೇಶ್ ಮತ್ತು ನಾಗಭೂಷಣ್ ಎಂಬುವವರು ಸೇರಿದ್ದೇವು. ನಾಗಭೂಷಣ್ ರವರ ತಂದೆಯ ಹೆಸರು ಹೇಳಲು ಬರುವುದಿಲ್ಲ. ನಾವು ಮತೆಕತೆ ಆಡಿದ ಸಮಯ ಸುಮಾರು ಬೆಳಗ್ಗೆ 11 ಗಂಟೆ ಆಗಿರುಬಹುದು ಅದರೆ ನನಗೆ ನಿಖರವಾಗಿ ನೆನಪಿರುವುದಿಲ್ಲ. ಮಾತುಕತೆ ನಡೆದ ದಿನಾಂಕದಂದು ಪ್ರತಿವಾದಿಯು ದಾವಾ ಸ್ವತ್ತು ತನ್ನ ಸ್ವಯರ್ಜಿತ ಸ್ವತ್ತು ಹಾಗೂ ಅದರಲ್ಲಿ ಇತರೆ ಯಾರಿಗೂ ಯಾವುದೇ ಭಾಗ ಇರುವುದಿಲ್ಲ ಎಂದು ಮತ್ತು ತನ್ನ ಆರ್ಥಿಕ ಅವಷ್ಯಕತೆಗಳಿಗೆ ಹಣ ಬೇಕಾಗಿರುವುದರಿಂದ ದಾವಾ ಸ್ವತ್ತನ್ನು ಮಾರಾಟ ಮಾಡಲು ಒಪ್ಪುತಿರುವುದಾಗಿ ನನ್ನ ಯಜಮಾನರಿಗೆ ತಿಳಿಸಿರುತ್ತಾರೆ. ದಾವಾ ಸ್ವತ್ತಿನ ಒಂದು ಎಕರೆಗೆ ಎಷ್ಟು ಹಣ ಎಂದು ನನಗೆ ಗೊತ್ತಿಲ್ಲ, ನನ್ನ ಯಜಮಾನರಿಗೆ ತಿಳಿದಿತ್ತು ಆದರೆ ದಾವಾ ಸ್ವತ್ತು ಪೂರ್ಣವಾಗಿ 4 ಲಕ್ಷ 92 ಸಾವಿರಕ್ಕೆ ಮಾತುಕತೆ ಆಗಿತ್ತು ಎಂದು ನುಡಿದಿರುತ್ತಾರೆ. ಸದರಿ ವ್ಯವಹಾರವು ನಡೆಯುವ ಮುಂಚೆ ನನ್ನ ಯಜಮಾನರ ಹಾಗೂ ಪ್ರತಿವಾದಿಯ ನಡುವೆ ಬೇರೆ ಯಾವುದೇ ವ್ಯವಹಾರಗಳು ಇರಲಿಲ್ಲ. ನನ್ನ ಯಾಜಮಾನರು ಚೀಟಿ ಮತ್ತು ಬಡ್ಡಿ ವ್ಯವಹಾರ ಮಾಡುತಿದ್ದರು ಎಂದರೆ ಸರಿಯಲ್ಲ. ನನ್ನ ಯಜಮಾನರು ಚಕ್ಕಿನ ವ್ಯವಹಾರದ ಮೇಲೆ ಶಿರಾ ನ್ಯಾಯಾಲಯಕ್ಕೆ ಓಡಾಡುತಿದ್ದರು. ನನ್ನ ಯಜಾಮಾನರು ಜೀವಂತವಾಗಿರುವಾಗ ಹಣ ವಸೂಲಿ ಮಾಡಲು ಸುಮಾರು 10 ರಿಂದ 15 ಕೇಸ್ಗಳನ್ನು ದಾಖಲೆ ಮಾಡಿದ್ದರು ಎಂದರೆ ಸರಿಯಲ್ಲ. ನನ್ನ ಯಜಮಾನರು ಎಷ್ಟು ಪ್ರಕರಣಗಳನ್ನು ಹೂಡಿದ್ದರು ಎಂದರೆ ನನಗೆ ಗೊತ್ತಿಲ್ಲ. ಸಾಕ್ಷಿಯು ಮುಂದುವರೆದು ಪ್ರಸ್ತುತ 2 ಪ್ರಕರಣಗಳು ಇವೆ ಎಂದು ನುಡಿದಿರುತ್ತಾರೆ. ಕರಾರು ಪತ್ರವನ್ನು ಮಾಡಿಕೊಳ್ಳುವ ಮುನ್ನ ಅದರ ವಿಚಾರವಾಗಿ ಮಾತುಕತೆ ನಡೆದಿತ್ತು.ಯಾವ ದಾಖಲೆಗಳನ್ನು ನೋಡಿ ಕ್ರಯ ಪತ್ರವನ್ನು ಮಾಡಿಕೊಂಡೆವು ಎಂದರೆ ಅದು ನನ್ನ ಯಜಮಾನರು ನೋಡಿದ್ದರು, ಅದರ ಬಗ್ಗೆ ನನಗ ಗೊತ್ತಿಲ್ಲ. ಮನೆಯಲ್ಲಿ ಮಾತುಕತೆ ನಡೆದಾಗ ನಾನು ಅಲ್ಲಿಯೇ ಇದ್ದೆ ಎಂದರೆ ಸರಿ. ದಾವಾ ಸ್ವತ್ತು ಮೂಲವಾಗಿ ಯಾರ ಹೆಸರಿನಲ್ಲಿ ಇತ್ತು ಎಂದರೆ ಅದು ನನ್ನ ಯಜಮಾನರಿಗೆ ಗೊತ್ತಿರುತ್ತದೆ. ಅವರ ಮರಣದ ನಂತರ ಅದನ್ನು ನಾನು ತಿಳಿದುಕೊಳ್ಳಲು ಪ್ರಯತ್ನ ಮಾಡಿಲ್ಲ.

ನನ್ನ ಯಜಮಾನರು ಜೀವಂತವಾಗಿದ್ದಾಗ ಟೌನ್ ಬ್ಯಾಂಕ್ ಮತ್ತು ಕೆನರಾ ಬ್ಯಾಂಕ್ ಶಿರಾ ರಲ್ಲಿ ವ್ಯವಹಾರ ಮಾಡುತಿದ್ದರು. ನಾವು ಮುಂಗಡವಾಗಿ 4 ಲಕ್ಷ 75 ಸಾವಿರ ಹಣವನ್ನು ಕೊಟ್ಟೆವು. ಸದರಿ ಹಣವನ್ನು ನಾವು ಬಿಸ್ನೆಸ್ ಇಂದ ಬಂದ ಹಣದಿಂದ ನೀಡಿರುತ್ತೇವೆ. ನಮಗೆ ಅಂಗಡಿ, ಸೋಪಿನ ಬಿಸ್ನೆಸ್, ಹಾಗೂ ಮನೆಗಳ ಬಾಡಿಗೆ ಬರುತ್ತದೆ. ಸದರಿ ದಾಖಲೆಗಳನ್ನು ನ್ಯಾಯಾಲಯಕ್ಕೆ ಕೊಡಲು ಯಾವುದೇ ತೊಂದರೆ ಇಲ್ಲ ಎಂದರೆ ಅದು ನನ್ನ ಯಜಮಾನರ ತಿಳುವಳಿಕೆಯಲ್ಲಿ ಇತ್ತು, ನನಗೆ ಆ ದಾಖಲೆಗಳನ್ನು ಕೊಡಲು ಆಗುವುದಿಲ್ಲ.

ಪ್ರತಿವಾದಿ ಪರ ವಕೀಲರು ಮುಂದುವರೆದ ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು, ಪ್ರಕರಣವನ್ನು ಮುಂದುವರೆದ ಪಾಟೀ ಸವಾಲಿಗೆ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಕಂಪ್ಯೂಟರೀಕರಣಗಳಿಸಿ ಪ್ರಿಂಟ್ ತೆಗೆಯಲಾಯಿತು.)

ಓ.ಹೇ.ಕೇ.ಸರಿ.ಇದೆ.

ಸಹಿ/-

ಅಧಿಕ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ.,

ಶಿರಾ.